# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/35/2020-21 ದಿನಾಂಕ:20.09.2021

**-:ದಿನಾಂಕ:20.09.2021 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:20.09.2021 ರ ಸೋಮವಾರ ಮಧ್ಯಾಹ್ನ 3.00 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ.ಕುಬೇರಪ್ಪ. ಕೆ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ. ಹೂಡಿ ಉಪವಿಭಾಗ | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ. ವಾರ್ಡ್.ನಂ-54 | ಹಾಜರಿದ್ದರು. |
| 3. | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ-54 | ಹಾಜರಿದ್ದರು. |
| 4. | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, ವಾರ್ಡ್ ನಂ-54 | ಹಾಜರಿದ್ದರು. |
| 5. | ಶ್ರೀ. ಚಂದ್ರಪ್ಪ.ಬಿ | ಕಿರಿಯ ಆರೋಗ್ಯ ನೀರಿಕ್ಷಕರು ಭೈರತಿ ಹೂಡಿ-54 | ಹಾಜರಿದ್ದರು. |
| 6. | ಶ್ರೀ. ನವೀನ್ | ಎಇ. **ಬಿ.ಡಬ್ಲ್ಯೂ.ಎಸ್,ಎಸ್.ಬಿ** | ಹಾಜರಿದ್ದರು. |
| 7. | ಶ್ರೀ.ವೀರೇಶ್ | ಬೆಸ್ಕಾಂ ಕೊತ್ತನೂರು, ಪರವಾಗಿ | ಹಾಜರಿದ್ದರು. |
| 8. | ಶ್ರೀ.ಬಿ.ಕೆ.ಅಶ್ವತ್ ನಾರಾಯಣ | ಪಶುಪಾಲನೆ, ಪರವಾಗಿ | ಹಾಜರಿದ್ದರು. |
| 9. | ಶ್ರೀ.ರಘು .ಐ.ಆರ್ | ಸಾರ್ವಜನಿಕರು | ಹಾಜರಿದ್ದರು. |
| 10. | ಶ್ರೀಮತಿ.ಅನಿತಾ | ಸಾರ್ವಜನಿಕರು | ಹಾಜರಿದ್ದರು. |
| 11 | ಕಾಂತರಾಜು.ಎಂ | ಸಾರ್ವಜನಿಕರು | ಹಾಜರಿದ್ದರು. |

**ಸಭೆಯ ನಡುವಳಿಗಳು:-**

- ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ-54 ರವರು ಸಭೆಗೆ ಬಂದಿರುವ ವಾರ್ಡ್ ಸದಸ್ಯರಿಗೆ, ಅಧಿಕಾರಿ/ನೌಕರರುಗಳಿಗೆ ಸ್ವಾಗತಾ ಕೋರಿ ಸಭೆ ನಡೆಸಿಕೊಡುವಂತೆ ಕೊರಿದರು.
- ಅಧ್ಯಕ್ಷರು ಈ ಹಿಂದೆ ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ತಿರ್ಮಾನಗಳನ್ನು ಕೈಗೊಂಡಿರುವ ಬಗ್ಗೆ ಅಧಿಕಾರಿ/ನೌಕರರು ಚರ್ಚಿಸಲಾಯಿತ್ತು ಹಾಗೂ ಕ್ರಮವಹಿಸಲು ಸೂಚಿಸಲಾಯಿತ್ತು.

**I.ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

1) ಶಿಲ್ಪಕಶ್ಯಪ್ ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ ರವರು ಒಣತ್ಯಾಜ್ಯ ಸಂಗ್ರಹಣೆಗೆ 15 ದಿನಕ್ಕೊಮ್ಮೆ ಸಂಗ್ರಹಣೆಗೆ ಬರುತ್ತಾರೆಂದು ತಿಳಿಸಿದರು.
2) ಪ್ರಸಾದ್ ಆರ್.ಡಬ್ಲ್ಯೂ.ಎ. ರವರು ಆಟೋಗಳಲ್ಲಿ ಮೈಕ್ ಅಳವಡಿಸಿದ್ದು ಇದನ್ನು ಅಪ್ಯೆರ್‌ನೆಸ್ ಮಾಡುತ್ತಿರುವುದಿಲ್ಲ ಎಂದು ತಿಳಿಸಿದರು.
3) ಆರೋಗ್ಯ ಸ್ವಾಮಿ ಆರ್.ಡಬ್ಲ್ಯೂ.ಎ. ರವರು ತ್ಯಾಜ್ಯ ಸಂಗ್ರಹಣೆಗೆ ಆಟೋಗಳು ಸರಿಯಾಗಿ ಬರುತ್ತಿರುವುದಿಲ್ಲ ಎಂದು ತಿಳಿಸಿದರು
4) ಚಿಕ್ಕಬ್ಯೆರತಿ ಗ್ರಾಮದಲ್ಲಿ ಅತಿಯಾದ ಬ್ಲಾಕ್‌ಸ್ಪಾಟ್‌ಗಳಿರುತ್ತವೆ ಇವುಗಳನ್ನು ಸರಿಯಾಗಿ ತೆಗೆಯುತ್ತಿರುವುದಿಲ್ಲ ಎಂದು ಸದಸ್ಯರು ತಿಳಿಸಿದರು.

**ಕ್ರಂ.ಸಂ 1ರಿಂದ 4ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕ.ಅ. ಎಸ್.ಡಬ್ಲ್ಯೂ.ಎಂ/ಹಿ.ಆ.ಪ/ಕಿ.ಆ.ಪ)**

**II. ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

1. ಪ್ರಸಾದ್ ಆರ್.ಡಬ್ಲ್ಯೂ.ಎ. ರವರು ಅಯ್ಯಪ್ಪನಗರ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಒಳಚರಂಡಿ ಮ್ಯಾನ್‌ಹೋಲ್‌ಗಳಲ್ಲಿ ಮಳೆ ಬಂದ ಸಮಯದಲ್ಲಿ ನೀರು ತುಂಬಿ ರಸ್ತೆ ಹಾಗೂ ತಗ್ಗು ಪ್ರದೇಶಗಳಿಗೆ ಓವರ್‌ಪ್ಲೋ ಆಗಿ ಹರಿಯುತ್ತಿದ್ದು ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು ಕೂಡಲೇ ಯಂತ್ರೋಪಕರಣಗಳಿಂದ ಕೆಸಲ ನಿರ್ವಹಿಸಲು ತಿಳಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು ಹಾಲಿ ಇರುವಂತಹ ಹಾಲಿ ಇರುವ ಕೊಳವೆ ಬಾಯಿಗಳಿಂದ ನೀರನ್ನು ಸಮರ್ಪಕವಾಗಿ ಸಾರ್ವಜನಿಕರಿಗೆ ನೀಡಲು ತಿಳಿಸಿದರು.
3. ಗ್ರಾಮಗಳಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರಿನ ಪೈಪ್ ಲೈನ್ ಅಳವಡಿಸುತ್ತಿರುವ ಕಾಮಗಾರಿಯನ್ನು ಕೂಡಲೇ ಮುಗಿಸಿ ಎನ್‌ಓಸಿ ಯನ್ನು ಬಿಬಿಎಂಪಿಗೆ ನೀಡಲು ತಿಳಿಸಿದರು.

**ಕ್ರಂ.ಸಂ 1ರಿಂದ 3ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬಿ.ಡಬ್ಲ್ಯೂ.ಎಸ್,ಎಸ್.ಬಿ.**

**ಕಾಮಗಾರಿ ಇಲಾಖೆ**

1) ಹೂಡಿ ಸರ್ಕಲ್ ನಿಂದ ಅಯ್ಯಪ್ಪನಗರ ವರೆಗೆ ಮೇಜರ್ ರೋಡ್ ನಿಂದ ರಸ್ತೆ ಅಗಲೀಕರಣ ಕಾರಣದಿಂದ ಹಾಲಿ ಇರುವ ನಿರಾಶ್ರಿತರ ಕೇಂದ್ರ, ವಾರ್ಡ್ ಕಛೇರಿ, ಗ್ರಂಥಾಲಯ, ಕಂದಾಯ ವಿಭಾಗದ ಶಾಖೆ ಈ ಎಲ್ಲಾ ಕಛೇರಿಗಳಿಗೆ ಜಾಗವನ್ನು ಗುರುತಿಸಿ ಹೊಸ ಕಟ್ಟಡ ನಿರ್ಮಾಣ ಮಾಡಲು welfare ಶಾಖೆಯಿಂದ ಕೋರಿದರು.
2) ಪ್ರಸಾದ್ ಸಾದರಮಂಗಲ ಆರ್.ಡಬ್ಲ್ಯೂ.ಎ. ರವರು ವಿಲೇಜ್‌ನ ಕೆಲವು ರಸ್ತೆಗಳ ಪಕ್ಕದ ಚರಂಡಿಗಳಲ್ಲಿ ನೀರು ಜೋರಾಗಿ ಮಳೆ ಬಂದ ಸಂದರ್ಭದಲ್ಲಿ ನೀರು ರಸ್ತೆಯ ಮೇಲೆ ಹರಿಯುತ್ತದೆ ಎಂದು ತಿಳಿಸಿದರು.
3) ಪ್ರಸಾದ್ ಕೊಡಿಗೇಹಳ್ಳಿ ರವರು ಕೊಡಿಗೇಹಳ್ಳಿ ಯಿಂದ ಸೊಣ್ಣೇನಹಳ್ಳಿ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್,ಎಸ್.ಬಿ ವತಿಯಿಂದ ರಸ್ತೆ ಅಗೆದಿದ್ದು ರಸ್ತೆ ಅಗೆತದ ಜಾಗದ ರಿಸ್ಟೋರೇಷನ್ ಮಾಡಲು ತಿಳಿಸಿದರು.
4) ಪ್ರಸಾದ್ ಸಾದರಮಂಗಲ ಆರ್.ಡಬ್ಲ್ಯೂ.ಎ. ರವರು ರವಿ ಗುತ್ತಿಗೆದಾರರು ತೆಗೆದುಕೊಂಡಿರುವ ಕಾಮಗಾರಿಯನ್ನು ಕೂಡಲೇ ಕೈಗೊಳ್ಳುವಂತೆ ತಿಳಿಸಿದರು.
5) ಪ್ರಸಾದ್ ಕೊಡಿಗೇಹಳ್ಳಿ ಆರ್.ಡಬ್ಲ್ಯೂ.ಎ. ರವರು 11ನೇ ಅಡ್ಡರಸ್ತೆ ಕೊಡಿಗೇಹಳ್ಳಿ ಸಿಲ್ಟ್ ಕ್ಲೀನ್ ಮಾಡಲು ತಿಳಿಸಿದರು.

**ಕ್ರಂ.ಸಂ 1ರಿಂದ 5ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸಕಾಅ/ಸಅ/ಬಿಬಿಎಂಪಿ.**

**ಬೀದಿ ದೀಪ**

1) ಶಿಲ್ಪ ಆರ್.ಡಬ್ಲ್ಯೂ.ಎ. ರವರು 1ನೇ ಕ್ರಾಸ್ ಇಲ್ಲಿ ಹೊಸ ಸ್ಟ್ರೀಟ್ ಲೈಟ್ ಹಾಕಲು ತಿಳಿಸಿದರು.
2) ಬೆಸ್ಕಾಂನಿಂದ ಹೊಸ ಲೈನ್ ಹಾಕುತ್ತಿರುವುದರಿಂದ ಬಿ.ಡಬ್ಲ್ಯೂ.ಎಸ್,ಎಸ್.ಬಿ ಗೆ ತೊಂದರೆಯಾಗುತ್ತಿರುವುದರ ಬಗ್ಗೆ ಎಇ ರವರು ತಿಳಿಸಿದರು.
3) ಬೆಸ್ಕಾಂ ಹಾಗೂ ಬಿ.ಡಬ್ಲ್ಯೂ.ಎಸ್,ಎಸ್.ಬಿ ಮುಂದಿನ ಕೆಲಸ ಕಾರ್ಯಗಳನ್ನು ಕೋ ಆಡಿನೇಷನ್‌ನಲ್ಲಿ ಕೆಲಸ ಮಾಡಲು ಸದಸ್ಯರುಗಳು ತಿಳಿಸಿದರು.

**ಕ್ರಂ.ಸಂ 1ರಿಂದ 3ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೋಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬಿ.ಡಬ್ಲ್ಯೂ.ಎಸ್,ಎಸ್.ಬಿ/ಬೆಸ್ಕಾಂ)**

**ಇತರೆ ವಿಷಯಗಳು:-**

1) ಪ್ರಸಾದ್ ಸಾದರಮಂಗಲ ರವರು ವೆಲ್‌ಫೇರ್ ಕಡೆಯಿಂದ ಒಂಟಿ ಮನೆಗಳಿಗೆ ಅರ್ಜಿ ಸಲ್ಲಿಸಿರುವವರನ್ನು ಕುಲಂಕುಶವಾಗಿ ಪರಿಶೀಲಿಸಿ ನಿಜವಾದ ಫಲಾನುಭವಿಗಳಿಗೆ ಮುಂಜೂರು ಮಾಡಲು ತಿಳಿಸಿದರು.

**ಪರಿಶೀಲಿಸಿ ಒಂದುವಾರದೋಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:-ವೆಲ್‌ಫೇರ್‌ಶಾಖೆ/ಸ.ಅ/ಬಿಬಿಎಂಪಿ**

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

20/9/2021

| | |
|---|---|
| ವಾರ್ಡ್ ಸಮಿತಿ ನೋಡಲ್ ಅಧಿಕಾರಿ ಹಾಗೂ<br>ಸ.ಕಾ.ಅ. ಹೂಡಿ ಉಪವಿಭಾಗ<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ<br>ಮಹದೇವಪುರ ವಲಯ | ವಾರ್ಡ್ ಸಮಿತಿ ಕಾರ್ಯದರ್ಶಿ<br>ಸಹಾಯಕ ಅಭಿಯಂತರರು<br>ವಾರ್ಡ್ ಸಂಖ್ಯೆ-54 ಹೂಡಿ<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ<br>ಮಹದೇವಪುರ ವಲಯ |